ಆ)2006–07ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ 190 ಮತ್ತು ಉಡುಪಿ ಜಿಲ್ಲೆಗೆ 350 ಮನೆಗಳು ಮಂಜೂರಾಗಿರುತ್ತದೆ ಇವುಗಳ ಪೈಕಿ 489 ಮನೆಗಳಿಗೆ ಫಲಾನುಭವಿಗಳನ್ನು ಅನುಮೋದಿಸಿ ಮಂಜೂರು ಪತ್ರ ನೀಡಲಾಗಿದೆ

ಇ) ಮತ್ಸ್ಯಾಶ್ರಯ 3ನೇ ಹಂತದ ಯೋಜನೆಯಡಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಮಂಜೂರಾದ 540 ಮನೆಗಳ ನಿರ್ಮಾಣಕ್ಕೆ ತಗಲುವ ಒಟ್ಟು ವೆಚ್ಚ ರೂ 2 16 ಕೋಟಿಗಳನ್ನು ನೋಡೆಲ್ ಏಜೆನ್ಸಿಗೆ ಬಿಡುಗಡೆಗೊಳಿಸಲಾಗಿದೆ ಇದರಲ್ಲಿ ಪ್ರಗತಿ ಆಧರಿಸಿ ರೂ 61 25 ಲಕ್ಷಗಳನ್ನು ಫಲಾನುಭವಿಗಳಿಗೆ ಈಗಾಗಲೇ ಬಿಡುಗಡೆ ಮಾಡಲಾಗಿದೆ

720 (1024) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹೈಯಾತ್ ಖಾನ್(ಹುಬ್ಬಳ್ಳಿ) –

ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

ಅ) ಬಿಪಿಎಲ್ ಕಾರ್ಡುದಾರರಿಗೆ ಗೋಧಿ, ಸಕ್ಕರೆ, ಅಕ್ಕಿ, ಸೀಮೆಎಣ್ಣೆಯನ್ನು ಎಷ್ಟು ಪ್ರಮಾಣದಲ್ಲಿ ಹಂಚಿಕೆ ಮಾಡಲಾಗುತ್ತದೆ (ವಿವರ ನೀಡುವುದು)

ಆ) ಸರ್ಕಾರ ಈ ವ್ಯವಸ್ಥೆಯನ್ನು ಬದಲಿಸಿ ಯೂನಿಟ್ ಪದ್ಧತಿಯಲ್ಲಿ ವಿತರಣೆ ಮಾಡುವಂತ ಸುತ್ತೋಲೆ ಹೊರಡಿಸಿರುವುದು ನಿಜವೇ ಯಾಗಿದ್ದಲ್ಲಿ ಪಡಿತರದಾರರಿಗೆ ತೊಂದರೆ ಆಗುವುದಿಲ್ಲವೆ ,

ಇ) ಪ್ರಸ್ತುತ ಆಹಾರಧಾನ್ಯ ವಿತರಣೆ ಮಾಡುತ್ತಿರುವ ಆಧಾರವೇನು ?

ಶ್ರೀ ಗೋವಿಂದ ಎಂ ಕಾರ್ಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು) –

ಅ) ರಾಜ್ಯದಲ್ಲಿ ಬಿಪಿಎಲ್ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ 4 ಕೆ ಜಿ ಅಕ್ಕಿ, 1 ಕೆ ಜಿ ಗೋಧಿ/ರಾಗಿ ಪ್ರತಿ ಚೀಟಿಗೆ ಗರಿಷ್ಠ 25 ಕೆ ಜಿ ಅಕ್ಕಿ/ಗೋಧಿ/ರಾಗಿ ಮಿತಿಗೆ ಒಳಪಟ್ಟು ಹಂಚಿಕೆ ನೀಡಲಾಗುತ್ತಿದೆ ಸಕ್ಕರೆಯನ್ನು ಪ್ರತಿ ಪಡಿತರ ಚೀಟಿಗೆ 1,200 ಗ್ರಾಂ ನಂತೆ ಹಂಚಿಕೆ ಮಾಡಲಾಗುತ್ತಿದೆ ಅಕ್ಕಿ ಮತ್ತು ಗೋಧಿ ಎರಡನ್ನು ಪ್ರತಿ ಕೆ ಜಿ ಗೆ ರೂ 3 00 ರಂತೆ ಹಾಗೂ ಸಕ್ಕರೆಯನ್ನು ಪ್ರತಿ ಕೆ ಜಿ ಗೆ ರೂ 13 50 ರಂತೆ ವಿತರಿಸಲಾಗುತ್ತದೆ

ಸೀಮೆ ಎಣ್ಣೆ	ಪ್ರಮಾಣ (ಲೀ)	ದರ (ರೂ)
ಅನೌಪಚಾರಿಕ ಪಡಿತರ ಪ್ರದೇಶ	7	9 30 ರಿಂದ 10 10
ಪಟ್ಟಣ	6	
ಗ್ರಾಮಾಂತರ	4	

ಅ) ಹೌದು

ಈ ಮೊದಲು ಇಡಿಗಂಟಾಗಿ ಆಹಾರಧಾನ್ಯಗಳನ್ನು ನೀಡುವ ಪದ್ಧತಿಯಲ್ಲಿ ಸದಸ್ಯರ ಸಂಖ್ಯೆಯನ್ನು ಪರಿಗಣಿಸದೇ ಒಬ್ಬ ಅಥವಾ ಇಬ್ಬರು ಸದಸ್ಯರಿರುವ ಕುಟುಂಬಗಳಿಗೂ ಹಾಗೂ ಹೆಚ್ಚಿನ ಸಂಖ್ಯೆಯ ಸದಸ್ಯರಿರುವ ಕುಟುಂಬಗಳಿಗೂ ಒಂದೇ ಪ್ರಮಾಣದ ಅಂದರೆ, 20 ಕೆ ಜಿ ಅಕ್ಕಿ ಹಾಗೂ 5 ಕೆ ಜಿ ಗೋಧಿಯನ್ನು

ವಿತರಿಸಲಾಗುತ್ತಿತ್ತು ಇದರಿಂದ ಸದಸ್ಯರ ಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಆಹಾರ ಧಾನ್ಯಗಳನ್ನು ವಿತರಿಸುವ ಯೂನಿಟ್ ಪದ್ಧತಿಯನ್ನು ಆರಂಭಿಸಲಾಗಿರುತ್ತದೆ ಈ ಪದ್ಧತಿಯಲ್ಲಿ ಪ್ರತೀ ಸದಸ್ಯರಿಗೆ ಸಹಾಯಧನಯುಕ್ತ 4 ಕೆ ಜಿ ಅಕ್ಕಿ ಜೊತೆಗೆ 1 ಕೆ ಜಿ ಗೋದಿ/ರಾಗಿಯನ್ನು ಪ್ರತಿ ಪಡಿತರ ಚೀಟಿಗೆ ಗರಿಷ್ಠ 25 ಕೆ ಜಿ ಅಕ್ಕಿ/ಗೋದಿ/ ರಾಗಿ ವಿತರಿಸಲಾಗುತ್ತಿದೆ ಕುಟುಂಬದ ಸದಸ್ಯರ ಸಂಖ್ಯೆಗೆ ಆಧಾರವಾಗಿ ಆಹಾರಧಾನ್ಯ ಹಂಚಿಕೆ ನೀಡಲಾಗುತ್ತಿದೆ ಅದರಂತೆ (ಬಿಪಿಎಲ್) ಅಕ್ಷಯ ಪಡಿತರ ಚೀಟಿದಾರರಿಗೆ ವಿತರಿಸಲಾಗುವ ಆಹಾರಧಾನ್ಯಕ್ಕೆ ಮಾತ್ರ ಯೂನಿಟ್ ಪದ್ಧತಿ ಅಳವಡಿಸಿ ಜಾರಿಗೆ ನೀಡಲಾಗಿರುತ್ತದೆ ಅದರಂತೆ ಏಕ ಸದಸ್ಯರಿಂದ 5 ಸದಸ್ಯರಿರುವ ಕುಟುಂಬಗಳು ಪಡೆಯುವ ಆಹಾರಧಾನ್ಯದ ಪ್ರಮಾಣ ಈ ಕೆಳಕಂಡಂತಿರುತ್ತದೆ –

ಕ್ರ ಸಂ	ಕುಟುಂಬದ ಸದಸ್ಯರ ಸಂಖ್ಯೆ	ವಿತರಿಸುವ ಆಹಾರ ದಾನ್ಯದ ಪ್ರಮಾಣ	
		ಅಕ್ಕಿ	ಗೋಧಿ
1	ಏಕಸದಸ್ಯ	04 ಕೆಜಿ	1 ಕೆಜಿ
2	ದ್ವಿಸದಸ್ಯ	08 ,,	2 ,,
3	ತ್ರಿಸದಸ್ಯ	12 ,,	3 ,,
4	4 ಸದಸ್ಯ	16 ,,	4 ,,
5	5 ಮತ್ತು ಅದಕ್ಕಿಂತ ಮೇಲ್ಪಟ್ಟ ಸದಸ್ಯ	20 ,,	5 ,,

721 (467) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) –

a) The number of suicides of the farmers in the State during the last 2 years ,

b) The compensation provided to these farmers (details be furnished) ,

c) Whether the Government has received any central Government aid in this regard ,

d) If yes, the amount received and spent ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು) –

a) 483 cases of farmers suicide are reported in the State between 2005-06 & 2006-07